**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,</u>**

**<u>ಪಿರಿಯಾಪಟ್ಟಣ.</u>**

**ಸಿ ಸಿ ಸಂಃ 7/2023**

| | | |
|---|---|---|
| ಸಾಕ್ಷಿಯ ಹೆಸರುಃ | ಮಧು ಕೆ.ಎಂ | ಫಿರ್ಯಾದಿ ಸಾಃ 1 |
| ತಂದೆ ಹೆಸರುಃ | ಲೇಟ್ ಮಹದೇವಚಾರ್ | ಚಾಸಾಃಃ 1 |
| ವಯಸ್ಸುಃ | 38 ವರ್ಷ | ಪ್ರಮಾಣೀಕರಿಸಿದ ದಿಃ 19/08/2025 |
| ಉದ್ಯೋಗಃ | ಹೆಚ್.ಸಿ -216, ಪಿರಿಯಾಪಟ್ಟಣ ಪೊಲೀಸ್ ಠಾಣೆ. | |
| ವಾಸ ಸ್ಥಳಃ | ಪಿರಿಯಾಪಟ್ಟಣ | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ</u>**

ನಾನು 2019 ರಿಂದ ಜುಲೈ-2024 ರವರೆಗೆ ಬೆಟ್ಟದಪುರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿನಾಂಕಃ19/12/2022 ರಂದು ನನಗೆ ತಮ್ಮಡಹಳ್ಳಿಯಲ್ಲಿ ಗಸ್ತು ಮಾಡಲು ನೇಮಿಸಿದ್ದರು. ನನಗೆ ಮತ್ತು ಚಾಸಾ-5 ರವರಿಗೆ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿರುತ್ತದೆ. ನಾನು ಸಂಜೆ 6.00 ಗಂಟೆ ಸಮಯದಲ್ಲಿ ತಮ್ಮಡಹಳ್ಳಿ ಗ್ರಾಮದ ಬಸವೇಶ್ವರ ದೇವಸ್ಥಾನದ ಹತ್ತಿರ ಹೋದಾಗ ಬಾತ್ಮಿದಾರರನ್ನು ಬರಮಾಡಿಕೊಂಡು ಮಾಹಿತಿ ಸಂಗ್ರಹಿಸುತ್ತಿದ್ದೆ. ನಂತರ ಅಲ್ಲಿಗೆ ಆರೋಪಿತ ಏಕಾಏಕಿ ಬಂದು ಏ ಪೊಲೀಸ್ ಬೋಳಿ ಮಗನೇ ಮಾಹಿತಿ ಬಂದಿದ್ದರೂ ಸಹ ಯಾಕೇ ಎಲ್ಲರನ್ನೂ ವಿಚಾರಿಸುತ್ತೀದ್ದೀರಿ ಎಂದು ಬೈದರು. ನಾನು ಆರೋಪಿತನಿಗೆ ಮಾಹಿತಿ ಗೊತ್ತಿದ್ದರೆ ನಾನು ಏಕೆ ಬೇರೆಯವನ್ನು ಕೇಳುತ್ತಿದ್ದೆ, ನಿನಗೆ ಗೊತ್ತಿದ್ದರೆ ಹೇಳು ಎಂದು ತಿಳಿಸಿದೆ. ಅದಕ್ಕೆ ಆರೋಪಿತ ನಿನ್ನ ಸಂಬಳ ನನಗೆ ಕೊಡುತ್ತೀಯಾ, ಮಾಹಿತಿ ಗೊತ್ತಿದ್ದರೆ ಹೇಳುತ್ತಿದ್ದೆ ಬೋಳಿಮಗನೇ ಎಂದು ಬೈದಿರುತ್ತಾರೆ. ಆಗ ಅಲ್ಲೇ ಇದ್ದ ಚಾಸಾ-2 ಮತ್ತು

3 ರವರು ಆರೋಪಿತನಿಗೆ ತಿಳುವಳಿಕೆ ಹೇಳಿರುತ್ತಾರೆ. ಆದರೂ ಸಹ ಆರೋಪಿತ ಈ ಪೊಲೀಸ್ ಬೋಳಿಮಗ ಇಲ್ಯಾಕೇ ಬಂದಿದ್ದಾನೆ, ಇನ್ನೊಂದು ಸಲ ಬಂದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ. ಸಮವಸ್ತ್ರದಲ್ಲಿದ್ದ ನನ್ನನ್ನು ಆರೋಪಿತ ತಳ್ಳಾಡಿರುತ್ತಾನೆ. ಅದರಿಂದ ನನ್ನ ಸಾರ್ವಜನಿಕ ಕೆಲಸಕ್ಕೆ ಅಡ್ಡಿಪಡಿಸಿರುತ್ತಾರೆ. ನಂತರ ಠಾಣೆಗೆ ಬಂದು ಚಾಸಾ–5 ರವರಿಗೆ ವರದಿಮಾಡಿ ದೂರು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು.

3. ದಿಃ20/12/202 ರಂದು ಚಾಸಾ–5 ರವರು ಘಟನಾ ಸ್ಥಳಕ್ಕೆ ಬಂದು ಬೆಳಿಗ್ಗೆ 9.00 ರಿಂದ 9.45 ಗಂಟೆಯವರೆಗೆ ನಾನು ತೋರಿಸಿದಂತೆ ಸ್ಥಳ ಮಹಜರ್ ಕ್ರಮವನ್ನು ಚಾಸಾ–2 ಮತ್ತು 3 ರವರ ಸಮಕ್ಷಮ ಜರುಗಿಸಿದರು. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು. ಆರೋಪಿತ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ಎಸ್ ವಕೀಲರಿಂದಃ**

4. ಬಾತ್ಮಿದಾರರು ನನಗೂ ಮತ್ತು ಚಾಸಾ–5 ರವರಿಗೆ ಕರೆ ಮುಖಾಂತರ ಮಾಹಿತಿ ತಿಳಿಸಿದ್ದರು. ದೂರಿನಲ್ಲಿ ಸದರಿ ವಿಷಯವನ್ನು ತಿಳಿಸಿಲ್ಲ. ಮಾಹಿತಿ ಬಂದ ನಂತರ ಚಾಸಾ–5 ರವರು ಸ್ಥಳಕ್ಕೆ ಹೋಗಿಲ್ಲ. ಚಾಸಾ–5 ರವರ ಆದೇಶದಂತೆ ನಾನು ಸ್ಥಳಕ್ಕೆ ಹೋದೆ ಎಂದು ದೂರಿನಲ್ಲಿ ನಮೂದಿಸಿಲ್ಲ. ಬಾತ್ಮಿ ಬಂದಾಗ ನಾನು ಬೆಟ್ಟದಪುರ ಠಾಣೆಯಲ್ಲಿದ್ದೆ. ನಾವು ಠಾಣೆಗೆ ಹಾಜರಾದ ಬಗ್ಗೆ ಹಾಜರಾತಿ ಪುಸ್ತದದಲ್ಲಿ ಸಹಿ ಮಾಡುವುದಿಲ್ಲ. ಆದರೆ ಪೊಲೀಸ್ ಐಟಿಯಲ್ಲಿ ನಮೂದಿರುತ್ತದೆ. ಸದರಿ ಪೊಲೀಸ್ ಐಟಿಯ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಚಾಸಾ–5 ರವರು ಮೌಖಿಕವಾಗಿ ಸ್ಥಳಕ್ಕೆ ಬೇಟಿ ನೀಡಲು ತಿಳಿಸಿದ್ದರು. ದೂರಿನಲ್ಲಿ ಮೌಖಿಕವಾಗಿ ತಿಳಿಸಿದ ಬಗ್ಗೆ ನಮೂದಿಸಿಲ್ಲ. ಆ ರೀತಿ ನಮೂದಿಸಲು ತೊಂದರೆ ಇರಲಿಲ್ಲ.

5. ನನಗೆ ಸಂಜೆ 5.30 ಗಂಟೆಗೆ ಮಾಹಿತಿ ಬಂತು. ಸದರಿ ಸಮಯವನ್ನು ದೂರಿನಲ್ಲಿ ನಮೂದಿಸಿಲ್ಲ. ಮೊದಲು ಚಾಸಾ–5 ರವರಿಗೆ ಕರೆಬಂತು, ನಂತರ ನನಗೆ ಕರೆ ಮಾಡಿ ತಿಳಿಸಿದರು. ಬೆಟ್ಟದಪುರದಿಂದ ತಮ್ಮಡಹಳ್ಳಿ ಗ್ರಾಮ 16 ಕಿ.ಮೀ ಅಂತರ ಇದೆ. ಠಾಣೆಯಿಂದ ಸದರಿ ಗ್ರಾಮವನ್ನು ತಲುಪಲು ಅರ್ಧ ಗಂಟೆ ಸಮಯ ಬೇಕು. ತಮ್ಮಡಹಳ್ಳಿ ಗ್ರಾಮಕ್ಕೆ ನನ್ನ ಬೈಕಿನಲ್ಲಿ ಹೋಗಿರುತ್ತೇನೆ. ನನ್ನ ಪಿರ್ಯಾದಿಯಲ್ಲಿ ಬೈಕಿನಲ್ಲಿ ಹೋದ ಬಗ್ಗೆ ನಮೂದಿಸಿಲ್ಲ, ಆ ರೀತಿ ನಮೂದಿಸಲು ತೊಂದರೆ ಇರಲಿಲ್ಲ. ಬೀಟ್ ಪುಸ್ತಕದಲ್ಲಿ ನಾವು ಬೀಟ್ ಮಾಡಿದ ಬಗ್ಗೆ ನಮೂದಿಸಿ, ಸ್ಥಳದ ಸಾರ್ವಜನಿಕರ ಸಹಿ ಪಡೆಯಬೇಕು ಎಂದರೆ ಸರಿ. ಬೀಟ್ ಪುಸ್ತಕದಲ್ಲಿ ಗ್ರಾಮದಲ್ಲಿ ಸಮಸ್ಯೆ ಇದ್ದರೆ ಅದನ್ನು ನಮೂದಿಸಬೇಕು ಎಂದರೆ ಸರಿ. ಬೀಟ್ ಪುಸ್ತಕದಲ್ಲಿ ತಮ್ಮಡಹಳ್ಳಿ ಗ್ರಾಮಕ್ಕೆ ಹೋದ ಬಗ್ಗೆ ನಮೂದಿಸಿದ್ದೇನೆ. ಬೀಟ್ ಪುಸ್ತಕವನ್ನು ನ್ಯಾಯಾಲಯಕ್ಕೆ ನೀಡಿಲ್ಲ. ನಮ್ಮ ತನಿಖಾಧಿಕಾರಿಗೆ ನೀಡಿದ್ದೆ. ಬಸವೇಶ್ವರ ದೇವಸ್ಥಾನ ಸಾರ್ವಜನಿಕ ಸ್ಥಳ ಎಂದರೆ ಸರಿ. ಅಲ್ಲಿ ನೂರಾರು ಜನ ಇರುತ್ತಾರೆ ಎಂದರೆ ಸರಿ. ಆ ದಿನ ಸಂಜೆ ಮಳೆ ಇದ್ದುದ್ದರಿಂದ ಸಾಕಷ್ಟು ಜನ ಇರಲಿಲ್ಲ. ಆ ರೀತಿ ನನ್ನ ದೂರಿನಲ್ಲಿ ನಮೂದಿಸಿಲ್ಲ.

6. ಆರೋಪಿತ ಶಾಲಾ ಅಭಿವೃದ್ಧಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಆರೋಪಿತ ಶಾಲಾ ಆವರಣದಲ್ಲಿ ಮದ್ಯದ ಪ್ಯಾಕೇಟುಗಳನ್ನು ಬಿಸಾಡಿದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮ ಠಾಣೆಗೆ ಹಲವಾರು ಬಾರಿ ದೂರು ಸಲ್ಲಿಸಿದ್ದರು ಎಂದರೆ ಸರಿ. ಹಲವಾರು ಬಾರಿ ನಾನು ಗಸ್ತಿಗೆ ಹೋದಾಗ ಶಾಲಾ ಆವರಣದಲ್ಲಿ ಬಿಸಾಡಿದಂತಹ ಮದ್ಯದ ಪ್ಯಾಕೇಟುಗಳ ಬಗ್ಗೆ ತಿಳಿಸುತ್ತಿದ್ದರು ಎಂದರೆ ಸರಿಯಲ್ಲ. ಗಸ್ತಿಗೆ ಹೋದಾಗ ಆ ರೀತಿ ನನಗೆ ತಿಳಿಸಿದ್ದರೂ ಸಹ ನಾನು ಕ್ರಮ ತೆಗೆದುಕೊಳ್ಳದ ಕಾರಣ, ನನ್ನ ಮೇಲಾಧಿಕಾರಿಗಳಿಗೆ ನನ್ನ ವಿರುದ್ಧ ಆರೋಪಿತ ದೂರು ನೀಡಿದ್ದರು ಎಂದರೆ ಸರಿಯಲ್ಲ. ಆ ದೂರಿನ ಸಂಬಂದ ನನಗೂ ಮತ್ತು ಆರೋಪಿತನಿಗೂ ವೈಮನಸ್ಸು ಎಂದರೆ ಸರಿಯಲ್ಲ. ನಾನು ಗಸ್ತು ಪೊಲೀಸ್ ಆಗಿದ್ದು, ನನ್ನ ಕರ್ತವ್ಯವನ್ನು ಸರಿಯಾಗಿ ನಿಭಾಯಿಸದೇ ಇದ್ದುದ್ದರಿಂದ ಆರೋಪಿತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

7. ನನ್ನ ಬಳಿ ಮೊಬೈಲ್ ಇದೆ. ಯಾವುದಾದರೂ ಘಟನೆ ನಡೆದಾಗ ಮೊಬೈಲ್ ನಿಂದ ಚಿತ್ರೀಕರಿಸುತ್ತೇನೆ ಎಂದರೆ ಸರಿ. ಆರೋಪಿತ ನನ್ನ ಮೇಲೆಯೇ ಗಲಾಟೆ ಮಾಡಿದ್ದರಿಂದ ಮೊಬೈಲ್ ನಿಂದ ಚಿತ್ರೀಕರಿಸಿಲ್ಲ. ಯಾವುದೇ ಘಟನೆ ನಡೆದಿಲ್ಲದ ಕಾರಣ ನಾನು ಮೊಬೈಲಿನಿಂದ ಚಿತ್ರೀಕರಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಪಶ್ಚಿಮ ದಿಕ್ಕಿಗೆ ಬಸವೇಶ್ವರ ದೇವಸ್ಥಾನ ಇದೆ. ದಕ್ಷಿಣ ದಿಕ್ಕಿಗೆ ತಮ್ಮಡಹಳ್ಳಿಗೆ ಹೋಗುವ ಸಾಮಾನ್ಯ ರಸ್ತೆ ಇದೆ. ಪೂರ್ವ ದಿಕ್ಕಿಗೆ ಮಹೇಶ್ ರವರ ಮನೆ ಇದೆ. ಉತ್ತರ ದಿಕ್ಕಿಗೆ ಕಿತ್ತೂರು–ರಾವಂದೂರಿಗೆ ಹೋಗುವಂತಹ ಮುಖ್ಯ ರಸ್ತೆ ಇದೆ. ನಾನು ದೇವಸ್ಥಾನದ ರಸ್ತೆಯಲ್ಲಿ ನಿಂತಿದ್ದೆ. ದೂರಿನಲ್ಲಿ ದೇವಸ್ಥಾನದ ರಸ್ತೆಯಲ್ಲಿ ನಿಂತ ಬಗ್ಗೆ ತಿಳಿಸಿಲ್ಲ. ನಾನು ಆ ದಿನ ಆ ಸ್ಥಳಕ್ಕೆ ಹೋಗಿಲ್ಲ, ಆದ್ದರಿಂದ ಆ ವಿಚಾರಗಳನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತ ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿತ ಆ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಮದ್ಯದ ಸಂಬಂಧ ದಾಳಿ ನಡೆಸಬೇಕಾದರೆ ಇಲಾಖಾ ವಾಹನ ಮತ್ತು ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಹೋಗುತ್ತೇವೆ ಎಂದರೆ ಸರಿ. ಯಾವುದೇ ಸ್ಥಳ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೆ ತೊಂದರೆ ನೀಡಲು ಠಾಣೆಯಲ್ಲಿ ಪ್ರಕರಣವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತ ನನ್ನನ್ನು ಅಡ್ಡಗಟ್ಟಿಲ್ಲ ಮತ್ತು ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತ ಯಾವುದೇ ತಪ್ಪು ಮಾಡದಿದ್ದರೂ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹಿಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**